


# ಭಗವದ್ಗೀತೆಯ ವಿಶ್ವಸಂದೇಶ


ಡಾ. ರಫೀಕ್ ಜಕಾರಿಯಾ

ಡಾ. ರಫೀಕ್ ಜಕಾರಿಯಾ ಅವರು ಫೆಬ್ರವರಿ ೧೦, ೨೦೦೧ ರಂದು ಮುಂಬಯಿಯ ರಾಜಭವನದಲ್ಲಿ ಪರಮ ಪೂಜನೀಯ ಸ್ವಾಮಿ ರಂಗನಾಥಾನಂದಜಿಯವರು ಬರೆದ ಭಗವದ್ಗೀತೆಯ ಬಗೆಗಿನ Universal Message of the Bhagavad Gita ಎಂಬ ಪುಸ್ತಕದ ಎರಡು ಭಾಗಗಳ ಬಿಡುಗಡೆಯ ಸಮಾರಂಭದಲ್ಲಿ ಮಾಡಿದ ಪುಸ್ತಕದ ಪರಿಚಯ ಭಾಷಣದ ಅನುವಾದ ಇದು. ಮಹಾರಾಷ್ಟ್ರದ ಮಾನ್ಯ ರಾಜ್ಯಪಾಲರಾದ ಶ್ರೀ ಪಿ.ಸಿ. ಅಲೆಕ್ಸಾಂಡರ್ ಅವರು ಈ ಗ್ರಂಥವನ್ನು ಬಿಡುಗಡೆ ಮಾಡಿದರು.

ನಾನು ಸ್ವಾಮಿ ರಂಗನಾಥಾನಂದಜಿಯವರನ್ನು ಎರಡು ದಶಕಗಳ ಹಿಂದೆ ಕೊಲಂಬೊದಲ್ಲಿ ಅಂತಾರಾಷ್ಟ್ರೀಯ ಅಂತರ್-ಶ್ರದ್ಧೆಗಳ ಸಮಾವೇಶದಲ್ಲಿ ನೋಡಿದ್ದೆ. ಉದ್ಘಾಟನೆಯಲ್ಲಿ ಅವರ ಭಾಷಣ ಪ್ರಮುಖ ಆಕರ್ಷಣೆಯಾಗಿತ್ತು. ಭಾಷಣ ಕೇಳಿದ್ದಲ್ಲದೆ ಅವರ ಜತೆ ಅನೇಕ ಚರ್ಚೆಗಳಲ್ಲೂ ಭಾಗವಹಿಸಿದ್ದೆ. ಹಿಂದೂ ಧರ್ಮದ ಬಗೆಗೆ ನನ್ನ ಜ್ಞಾನವೃದ್ಧಿಗೆ ಇದು ಬಹು ಸಹಕಾರಿಯಾಗಿತ್ತು. ವಿಶಾಲ ಮಾನವನಿಷ್ಠೆಯ ಸಾಧನವಾಗಿ ಹಿಂದೂ ಧರ್ಮವನ್ನು ಎತ್ತಿ ತೋರಿಸುವಲ್ಲಿ ರಾಮಕೃಷ್ಣ ಮಿಷನ್ ಹಾಗೂ ಸ್ವಾಮೀಜಿಯವರ ಉತ್ಕೃಷ್ಟ ಕೊಡುಗೆಯ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ರಾಮಕೃಷ್ಣ ಮಿಷನ್ ಇನ್ನಷ್ಟು ಉನ್ನತ ಮಟ್ಟಕ್ಕೆ ಏರಲೇಬೇಕು.

ಭಗವದ್ಗೀತೆಯ ಬಗೆಗಿನ ಈ ಎರಡು ಸಂಪುಟಗಳು ಶ್ರೀಕೃಷ್ಣನ ಸಂದೇಶ ಹಾಗೂ ಆಧುನಿಕ ಕಾಲದಲ್ಲಿ ಅದರ ಮಹತ್ವದ ಬಗ್ಗೆ ಸ್ವಾಮೀಜಿಯವರ ಉಜ್ವಲ ವಿವರಣೆಗಳನ್ನು ಹೊಂದಿದೆ. ಆಧುನಿಕ ವಿಚಾರಗಳು, ಈ ದಿನದ ಆವಶ್ಯಕತೆಗಳನ್ನು ಗಮನದಲ್ಲಿಟ್ಟು ಗೀತೆಯ ಪ್ರತಿ ಶ್ಲೋಕವನ್ನೂ ಸ್ವಾಮೀಜಿ ತಮ್ಮ ವೇಗದ ಶೈಲಿಯಲ್ಲಿ ವಿವರಿಸಿದ್ದಾರೆ. ಗೀತೆಯ ಮೇಲಿನ ಪುಸ್ತಕಗಳಿಗೆ ಬರವಿಲ್ಲ; ಜಗತ್ತಿನಲ್ಲಿ ಗೀತೆ ಅನುವಾದಿತವಾಗದ ಭಾಷೆಯಿಲ್ಲ—ಅಕ್ಬರ್ ಮೊದಲು ಅದನ್ನು ಪರ್ಷಿಯನ್ನಿಗೆ ಅನುವಾದ ಮಾಡಿಸಿದ್ದ.

ನಾನು ಇಂಗ್ಲಿಷ್‌ನಲ್ಲಿ ಗೀತೆಯ ಅನೇಕ ಅನುವಾದಗಳನ್ನು ಓದಿದ್ದೇನೆ. ಸರ್ ಎಡ್ವಿನ್ ಆರ್ನಾಲ್ಡ್, ಅನಿಬೆಸೆಂಟ್, ಗಾಂಧಿ, ವಿನೋಬಾ, ರಾಧಾಕೃಷ್ಣನ್ ಮತ್ತಿತರರದ್ದು ಕೂಡ. ಒಂದಕ್ಕಿಂತ ಒಂದು ಭಿನ್ನ. ಬೊಂಬಾಯಿ ದ್ವಿಭಾಷಾರಾಜ್ಯವಾಗಿದ್ದಾಗ ಮುಖ್ಯಮಂತ್ರಿಯಾಗಿದ್ದ ಶ್ರೀ ಬಿ.ಜಿ.ಖೇರ್‌ರವರು ನನ್ನ ಮದುವೆಯ ಸಂದರ್ಭದಲ್ಲಿ ಗಾಂಧೀಜೀ ಗೀತೆಯ ಮೇಲೆ ಬರೆದ ಪುಸ್ತಕವನ್ನು ನನಗೆ ಉಡುಗೊರೆ ನೀಡಿದ್ದರು, ಅದನ್ನು ಜೋಪಾನವಾಗಿರಿಸಿದ್ದೇನೆ. ಸ್ವಾಮಿ ರಂಗನಾಥಾನಂದಜಿಯವರ ಗೀತಾ ನಿರೂಪಣೆ ಅನೇಕ ಬಗೆಯಲ್ಲಿ ಅನನ್ಯವಾಗಿದೆ ಎಂಬುದನ್ನು ನಾನು ಕಂಡಿದ್ದೇನೆ. ಅದು ಅತ್ಯಂತ ಸರಳವಾಗಿದ್ದೂ ಮೋಹಕ ಪಾಂಡಿತ್ಯವನ್ನೂ ಒಳಗೊಂಡಿದೆ. ಪ್ರತಿ ಶ್ಲೋಕದ ನಿಜವಾದ ಅರ್ಥ, ವಿವರಣೆಗಳನ್ನು ಶಂಕರರ ಭಾಷ್ಯದ ಅಭಿಪ್ರಾಯ, ಪ್ರಾಯೋಗಿಕ ವೇದಾಂತದ ಹಿನ್ನೆಲೆಯಲ್ಲಿ ಶ್ರೀರಾಮಕೃಷ್ಣರು ಹಾಗೂ ಸ್ವಾಮಿ ವಿವೇಕಾನಂದರು ಈ ಬಗ್ಗೆ ಹೇಳಿರುವುದರ ಜತೆ ಸಂಬಂಧಿಸುವುದರ ಜೊತೆಗೆ, ಅದು ಸಾಕ್ರಟೀಸ್, ಪ್ಲೇಟೊ, ಅರಿಸ್ಟಾಟಲ್‌ರಂತಹ ಮಹಾನ್ ಗ್ರೀಕ್ ತತ್ವಜ್ಞಾನಿಗಳ ಅಭಿ ಪ್ರಾಯದ ಜತೆ ಹೇಗೆ ಹೊಂದಿಕೊಳ್ಳುತ್ತದೆ ಎಂದು ವಿವರಿಸುತ್ತಾರೆ. ಶ್ರೀಕೃಷ್ಣನ ಸಂದೇಶದ ಆಳ ಅರ್ಥ, ಒಳಸೂಕ್ಷ್ಮಗಳನ್ನು




ವಿವರಿಸುತ್ತಲೇ ಸ್ವಾಮೀಜಿ ನಿಮ್ಮನ್ನು ಜ್ಞಾನೋದಯಕ್ಕೆ ಕಾರಣವಾಗುವ ಬೌದ್ಧಿಕ ಸಂಶೋಧನಾ ಪ್ರವಾಸಕ್ಕೆ ಕರೆದೊಯ್ಯುತ್ತಾರೆ. ಅಲ್ಲಿ ನೀವು ಬುದ್ಧ, ಮಹಾವೀರ, ಟಾವೋ, ಕ್ರಿಸ್ತ ಮತ್ತು ಪಶ್ಚಿಮದ ಬಹುತೇಕ ತಾತ್ತ್ವಿಕರನ್ನು ಭೇಟಿಯಾಗುತ್ತೀರಿ. ಶ್ರೀಕೃಷ್ಣನ ಸಂದೇಶದ ಜೊತೆಗೆ ಚತುರ ಬೌದ್ಧಿಕ ಚರ್ಚೆಯೊಂದರಲ್ಲಿ ಅವರು ತಮ್ಮ ಯೋಚನೆ ಗಳನ್ನು ಒಂದುಗೂಡಿಸುತ್ತಾರೆ. ಗೀತಾಶ್ಲೋಕಗಳ ನಿಜವಾದ ಆಳ ಅರ್ಥವನ್ನು ಕಂಡುಕೊಳ್ಳಲು ಸ್ವಾಮೀಜಿಯವರು ಐನ್‌ಸ್ಟೈನ್‌ರಂತಹ ಮಹಾನ್ ವಿಜ್ಞಾನಿಗಳು, ಸರ್ ಚಾರ್ಲ್ಸ್ ಶೆರ್ರಿಂಗ್‌ಟನ್‌ರಂತಹ ಪ್ರಸಿದ್ಧ ನರವೈದ್ಯರು, ವರ್ಡ್ಸ್‌ವರ್ತ್, ಶೆಲ್ಲಿಯಂತಹ ಕವಿಗಳು, ಜೂಲಿಯನ್ ಹಕ್ಸ್ಲೇ, ಬರ್ಟ್ರಾಂಡ್ ರಸೆಲ್ ರಂತಹವರ ತಾತ್ತ್ವಿಕರ ವಿಚಾರಗಳನ್ನು ತಂದುಕೊಡುತ್ತಾರೆ.

ಪ್ರತಿ ಶ್ಲೋಕವನ್ನೂ ಆಧುನಿಕ ಜೀವನದ ಆವಶ್ಯಕತೆಗಳಿಗೆ ಅನುಗುಣವಾಗಿ ನೋಡುತ್ತ, ಸ್ವಾಮೀಜಿಯವರು ಮಾನವನು ತನ್ನ ಅನುದಿನದ ಕಾರ್ಯ, ವ್ಯವಹಾರ, ಜ್ಞಾನಾರ್ಜನೆಯಲ್ಲಿ ತೊಡಗಿರುತ್ತಲೇ, ಶ್ರೀಕೃಷ್ಣನು ತಿಳಿಸುವ ಕರ್ಮಯೋಗಕ್ಕೆ ಅನುಗುಣವಾಗಿ ತನ್ನ ಕರ್ತವ್ಯಗಳನ್ನು ಹೇಗೆ ನಿರ್ವಹಿಸಬಹುದು ಎನ್ನುವುದರತ್ತ ಬೆಳಕು ಹರಿಸುತ್ತಾರೆ. ಇದು ತನ್ನನ್ನು ತಾನೇ ಉದ್ಧರಿಸಿಕೊಳ್ಳುವ ಆಶ್ಚರ್ಯಕರ ಮಾರ್ಗ.

ಈ ಎರಡು ಸಂಪುಟಗಳು ಗೀತೆಯ ಹನ್ನೊಂದು ಅಧ್ಯಾಯಗಳನ್ನು ಕುರಿತದ್ದು. ಉಳಿದ ಏಳು ಅಧ್ಯಾಯಗಳ ವಿವರಣೆಯನ್ನು ಸ್ವಾಮೀಜಿ ಇನ್ನೂ ಪ್ರಕಟಗೊಳಿಸಬೇಕಿದೆ (ಈಗ ಮೂರೂ ಸಂಪುಟಗಳು ಪ್ರಕಾಶಗೊಂಡಿವೆ ) .ಪ್ರತಿ ಅಧ್ಯಾಯದಲ್ಲೂ ವಿಚಾರದ ಸಂಪೂರ್ಣತೆ ಇದೆ ಮತ್ತು ವೈಚಾರಿಕ ಅಂತರ್ ಸಂಬಂಧದಿಂದ ಉಳಿದ ಅಧ್ಯಾಯಗಳ ಜತೆ ನಿರಂತರ ಹೊಂದಿಕೆಯೂ ಇದೆ. ಒಂದು ಸರಪಳಿಯ ಜತೆ ಇನ್ನೊಂದನ್ನು ಸೇರಿಸಿ, ಗೀತೆಯಲ್ಲಿ ಶ್ರೀಕೃಷ್ಣನ ಉಪದೇಶಗಳ ನಡುವೆ ಇರುವ ಹೊಂದಿಕೆ, ಐಕ್ಯತೆಯನ್ನು ಸ್ವಾಮೀಜಿ ಎತ್ತಿತೋರಿಸುತ್ತಾರೆ.

ನಿಮಗೆ ಅದರ ಇಣುಕುನೋಟವನ್ನು ಒದಗಿಸಲು ಸ್ವಾಮೀಜಿಯ ಅದ್ವಿತೀಯ ವಿವರಣೆಯ ಎರಡು ಉದಾಹರಣೆಗಳನ್ನು ನೀಡುತ್ತೇನೆ. ಶ್ರೀಕೃಷ್ಣನ ಮೂಲಭೂತ ಸಂದೇಶವನ್ನು ಗಮನದಲ್ಲಿಟ್ಟುಕೊಂಡೇ ಅವರು ಕೆಲವು ಶ್ಲೋಕಗಳನ್ನು ಆಧುನಿಕ ಆವಶ್ಯಕತೆಗಳಿಗೆ ಸಂಬಂಧಿಸುವ ರೀತಿ ಅಪೂರ್ವ.

ಸ್ವಾಮೀಜಿ ಹೀಗೆ ಬರೆಯುತ್ತಾರೆ : "ಭಾರತೀಯ ಮನಸ್ಸನ್ನು ಶತಮಾನಗಳಿಂದ ಯೋಚಿಸಹಚ್ಚಿರುವ ವಿಚಾರವೊಂದು ಗೀತೆಯಲ್ಲಿ ಮತ್ತೆ ಮತ್ತೆ ಬರುತ್ತದೆ. ಕರ್ಮ, ಅದಕ್ಕೆ ವಿರುದ್ಧವಾದ ಅಕರ್ಮ. ನಾನು ಏಕೆ ಕೆಲಸ ಮಾಡಬೇಕು? ಈ ವಿಚಾರ ಹೇಗೆ ಬೆಳೆಯಿತೆಂದರೆ, ಜನರಲ್ಲಿ ಹೆಚ್ಚು ಹೆಚ್ಚು ಸೋಮಾರಿತನ ಮೂಡುತ್ತಾ ಬಂತು! ಇದು ಸಂನ್ಯಾಸಿಗಳಿಗಾಗಿ ಪುರಸ್ಕರಿಸಲ್ಪಟ್ಟರೂ, ಗೃಹಸ್ಥರನ್ನೂ ಆವರಿಸಿತು. ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇದ್ದುದರಿಂದ, ದೇಶವನ್ನೇ ಹಾಳುಗೆಡುವಿತು." ಶ್ರೀಕೃಷ್ಣನೇನೋ ಅಕರ್ಮಕ್ಕಿಂತ ಕರ್ಮವು ಶ್ರೇಷ್ಠವೆಂದ; ಆದರೆ "ನಿನ್ನ ಅಧಿಕಾರ ಏನಿದ್ದರೂ ಕರ್ಮದೊಂದಿಗೆ ಮಾತ್ರ – ಅದರ ಫಲದೊಂದಿಗೆ ಎಂದಿಗೂ ಅಲ್ಲ" ಎಂಬ ಎಚ್ಚರಿಕೆಯನ್ನೂ ನೀಡಿದ. ಇಲ್ಲಿ ನಾನು ಇಕ್ಬಾಲ್‌ನು ತನ್ನ ಮೇರುಕೃತಿ ಅಸ್ರಾರ್-ಇ-ಖುಲಡಿಯಲ್ಲಿ ಹೇಳಿದ್ದನ್ನು ಗಮನಕ್ಕೆ ತರುವೆ: "ಮಾನವನ ಬೌದ್ಧಿಕ ಚರಿತ್ರೆಯಲ್ಲಿ ಅತಿ ಗೌರವ, ಆದರಗಳಿಂದ ನೆನೆಯಬೇಕಾದ ಹೆಸರು, ಕೃಷ್ಣನದು. ಈ ಅದ್ಭುತ ಮಾನವನು ತನ್ನವರ ತಾತ್ತ್ವಿಕ ಅಭಿಪ್ರಾಯಗಳನ್ನು ವಿಚ್ಛೇದಿಸಿ, ವೈರಾಗ್ಯವೆಂದರೆ ಸಂಪೂರ್ಣ ಕರ್ಮತ್ಯಾಗವಲ್ಲ ಎಂಬ ಸತ್ಯವನ್ನು ಎತ್ತಿಹಿಡಿದನು."

ಗೀತೆಯಲ್ಲಿನ ಇನ್ನೊಂದು ವಿಚಾರ ಮಾನವ ಸಂಬಂಧಗಳ ಮೇಲೆ ಒತ್ತನ್ನು ನೀಡುವ ಯಜ್ಞದೃಷ್ಟಿ. ಸ್ವಾಮೀಜಿ ತಮ್ಮ ಅನಿಸಿಕೆಯನ್ನು ಅಭಿವ್ಯಕ್ತಿಸಲು ವಿವೇಕಾನಂದರ ಹೇಳಿಕೆಯನ್ನು ಉದ್ಧರಿಸುತ್ತಾರೆ. "ಅಜ್ಞಾನವೇ ನಮ್ಮ ಎಲ್ಲ ಸಂಕಟ ದುಃಖಗಳಿಗೆ ಕಾರಣವೆಂದು ಉಪನಿಷತ್ತುಗಳು ಸಾರಿವೆ. ಸಾಮಾಜಿಕವಿರಲಿ, ಆಧ್ಯಾತ್ಮಿಕವಿರಲಿ ಜೀವನದ ಎಲ್ಲ ಸ್ಥಿತಿಗಳಲ್ಲೂ ಇದು ಸಂಪೂರ್ಣ ಸತ್ಯ. ನಾವು ಒಬ್ಬರನ್ನೊಬ್ಬರು ದ್ವೇಷಿಸಲು ಕಾರಣ ಅಜ್ಞಾನವೇ. ಪರಸ್ಪರರನ್ನು ಅರ್ಥಮಾಡಿಕೊಳ್ಳದಿರಲು, ಪ್ರೀತಿಸದಿರಲು ಕಾರಣ ಅಜ್ಞಾನವೇ." ವಿವೇಕಕ್ಕೆ ಕೃಷ್ಣನು ಪ್ರಾಮುಖ್ಯ ನೀಡಿದ್ದಾನೆ. "ಅತ್ಯಂತ ಪಾಪಿಗಳಾದವರೂ ತಮ್ಮ ಪಾಪಗಳೆಲ್ಲವನ್ನೂ ವಿವೇಕದಿಂದ ಗೆಲ್ಲಬಲ್ಲರು" ಎಂದು ಕೃಷ್ಣನು ಹೇಳಿ, "ವಿವೇಕವು ಜ್ಞಾನದೊಂದಿಗೆ ಸೇರಿರಬೇಕು" ಎನ್ನುತ್ತಾನೆ.

ಸ್ವಾಮೀಜಿ ಸಮದರ್ಶನದ ಬಗೆಗೆ ತುಂಬ ಮನಸೆಳೆಯುವ ವಿವರಣೆ ನೀಡುತ್ತಾರೆ. ಅರ್ಜುನ ಕೇಳುತ್ತಾನೆ : "ಚಂಚಲವೂ, ಬಲವಾದ ವೇಗವುಳ್ಳದ್ದೂ, ಗಾಳಿಯಂತೆ ಬಣ್ಣಿಸಲು ಅಸಾಧ್ಯವಾದದ್ದೂ ಆದ ಮನಸ್ಸನ್ನು ನಿಗ್ರಹಿಸುವುದಾದರೂ ಹೇಗೆ?" ಶ್ರೀಕೃಷ್ಣ ಉತ್ತರಿಸುತ್ತಾನೆ "ಅದನ್ನು ನಿರಂತರ ಅಭ್ಯಾಸದಿಂದ, ವೈರಾಗ್ಯದಿಂದ ನಿಗ್ರಹಿಸಬಹುದು." ಸ್ವಾಮೀಜಿಯವರು ಬರೆದ ಗೀತೆಯ ಎರಡು ಸಂಪುಟಗಳಿಂದ ನಾನು ಪಡೆದ ಜ್ಞಾನ, ಸಂತೋಷವನ್ನು ಇದೇ ರೀತಿ ವಿಸ್ತರಿಸುತ್ತ ಹೋಗಬಹುದು. ಇಲ್ಲಿಗೆ ನನ್ನ ಈ ಪರಿಚಯ ಭಾಷಣವನ್ನು ಮುಗಿಸುತ್ತೇನೆ. ಮೂಲ: ಭವನ್ಸ್ ಜರ್ನಲ್, ಮಾರ್ಚ್ ೧೫, ೨೦೦೧

**ದಯವಿಟ್ಟು ಗಮನಿಸಿ**

ಸ್ವಾಮಿ ರಂಗನಾಥಾನಂದಜೀಯವರ ಈ ಇಂಗ್ಲಿಷ್ ಕೃತಿಯು "ಭಗವದ್ಗೀತೆಯ ವಿಶ್ವಸಂದೇಶ" ಎಂಬ ಹೆಸರಿನಲ್ಲಿ ಕನ್ನಡಾನುವಾದಗೊಳ್ಳುತ್ತಿದೆ. ಮೈಸೂರು ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟವಾಗುತ್ತಿರುವ ಅದರ ಮೊದಲ ಭಾಗವು ಶ್ರೀಕೃಷ್ಣ ಜನ್ಮಾಷ್ಟಮಿ (ಆಗಷ್ಟ್ ೧೨) ಯಂದು ಬಿಡುಗಡೆಯಾಗಲಿದೆ. ಪ್ರತಿಯ ಬೆಲೆ ರೂ.೧೦೦.೦೦. ಅಂಚೆ ವೆಚ್ಚ ಸಹಿತ ರೂ.೧೩೫.೦೦ ಡಿ.ಡಿ. ಅಥವಾ ಚೆಕ್ ಮೂಲಕ ಹಣಕಳುಹಿಸಿ ಪುಸ್ತಕವನ್ನು ಅಂಚೆ ಮೂಲಕ ಪಡೆಯಬಹುದು.